## ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂಃ651/2023**

ಸಿಡಬ್ಲ್ಯು ಃ 1

| | |
|---|---|
| ಸಾಕ್ಷಿಯ ಹೆಸರು | ಃ ಆನಂದ ಕೆ. |
| ತಂದೆಯ ಹೆಸರು | ಃ ಲೇಟ್. ರಂಗಸ್ವಾಮಯ್ಯ |
| ವಯಸ್ಸು | ಃ 28 ವರ್ಷ |
| ವೃತ್ತಿ | ಃ ಉಪ ವಲಯ ಅರಣ್ಯಾಧಿಕಾರಿ, ವಿರಾಜಪೇಟೆ ವಲಯ |
| ವಾಸಸ್ಥಳ | ಃ ವಿರಾಜಪೇಟೆ |

**ದಿನಾಂಕಃ 21.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಃ ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ನಾನು ದಿಃ16.11.2020 ರಿಂದ ಇಲ್ಲಿಯವರೆಗೂ ವಿರಾಜಪೇಟೆ ವಲಯದ ಹೆಗ್ಗಳ ಶಾಖೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 29.04.2021 ರಂದು ವಿರಾಜಪೇಟೆ ವಲಯ ಅರಣ್ಯಾಧಿಕಾರಿಗಳಿಗೆ ಬಂದ ಮಾಹಿತಿ ಮೇರೆಗೆ ನಾನು ಮತ್ತು ಸಿಬ್ಬಂದಿಗಳು ಸಮಯ ಮಧ್ಯರಾತ್ರಿ 1.45 ಗಂಟೆಗೆ ವಿರಾಜಪೇಟೆ ಕಚೇರಿಯಿಂದ ಹೊರಟು, ಪಾಲಂಗಾಲ ಗ್ರಾಮದ ಕುಲ್ಲಚಂಡ ಗಣಪತಿರವರಿಗೆ ಸೇರಿದೆ ಎನ್ನಲಾದ ಲೈನ್ ಮನೆಯಲ್ಲಿ ವನ್ಯಪ್ರಾಣಿಯನ್ನು ಬೇಟೆ ಮಾಡಿ, ಮಾಂಸವನ್ನು ಭಕ್ಷನೆ ಮಾಡುತ್ತಿರುವ ಬಗ್ಗೆ ಬಂದ ಮಾಹಿತಿಯ ಮೇರೆಗೆ ನಾನು ಮತ್ತು ಸಿಬ್ಬಂದಿಗಳು ಸದರಿ ಲೈನ್ ಮನೆಯ ಕಡೆಗೆ ಹೋಗಿ, ಬಾಗಿಲ ಹತ್ತಿರ ಹೋಗುತ್ತಿದ್ದಂತೆ ಯಾರೋ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಿದ್ದು, ನಮ್ಮ ಸಿಬ್ಬಂದಿಗಳು ಸದರಿ ವ್ಯಕ್ತಿಯನ್ನು ಕೆದಮಳ್ಳೂರು ಗ್ರಾಮದ ಮುದ್ದು ಸೋಮಯ್ಯ ಎಂಬುದಾಗಿ ಗುರುತಿಸಿರುತ್ತಾರೆ. ನಂತರ ನಾವು ಮನೆಯ ಒಳಗೆ ಹೋಗಿ ಪರಿಶೀಲಿಸಿ ನೋಡಿದಾಗ ಒಬ್ಬ ವ್ಯಕ್ತಿ ಮಲಗಿದ್ದು, ಆತನನ್ನು ವಿಚಾರಿಸಿದಾಗ ಆತನ ಹೆಸರು ಸುನೀಲ್ ಎಂಬುದಾಗಿ ತಿಳಿಸಿರುತ್ತಾರೆ. ನಾನು ಮತ್ತು ನನ್ನ ಅಕ್ಕನ ಗಂಡನಾದ ಮುದ್ದು ಸೋಮಯ್ಯ

ರವರು ಪಾಲಂಗಾಲ ಗ್ರಾಮದ ಕರಿನೆರವಂಡ ಮೇದಪ್ಪ ರವರಿಂದ ಒಂಟಿ ನಳಿಕೆ ಕೋವಿಯನ್ನು ಪಡೆದು, ವನ್ಯ ಪ್ರಾಣಿಯನ್ನು ಬೇಟೆ ಮಾಡಿ, ಮಾಂಸವನ್ನು ಚರ್ಮದಿಂದ ಬೇರ್ಪಡಿಸಿ, ಸ್ವಲ್ಪ ಭಾಗ ತಿಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಲೈನ್ ಮನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಿದಾಗ ಪಾತ್ರೆಯಲ್ಲಿ ಬೇಯಿಸಿದ ಮಾಂಸ ದೊರೆತಿದ್ದು, ಸದರಿ ಪ್ರಾಣಿಯ ಚರ್ಮವನ್ನು ಬೇರ್ಪಡಿಸಿದ ಸ್ಥಳವನ್ನು ಕೇಳಲಾಗಿ, ಲೈನ್ ಮನೆಯ ಪಕ್ಕದ ತೋಡಿನಲ್ಲಿ ಸ್ವಚ್ಛ ಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಸಿಬ್ಬಂದಿಗಳು ತೋಡಿನ ಬಳಿ ಹೋಗಿ ನೋಡಲಾಗಿ, ಸದರಿ ಪ್ರಾಣಿಯ ಚರ್ಮ ದೊರೆತಿದ್ದು, ಪ್ರಾಣಿಯನ್ನು ಭೇಟೆ ಮಾಡಲು ಬಳಸಿದ ಕೋವಿಯನ್ನು ತೋರಿಸುವಂತೆ ಕೇಳಲಾಗಿ, ಸದರಿ ಮನೆಯ ಬಾಗಿಲ ಹಿಂದೆ ಇಟ್ಟಿರುವುದಾಗಿ ತಿಳಿಸಿರುತ್ತಾರೆ. ನಾವುಗಳು ನೋಡಲಾಗಿ ಬಾಗಿಲ ಹಿಂದೆ ಒಂಟಿ ನಳಿಗೆ ಕೋವಿ ಇದ್ದು, ಸದರಿ ಭೇಟೆಯಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರು ಮತ್ತು ಅಮಾನತ್ತು ಮಹಜರನ್ನು ಇಲಾಖಾ ಸಿಬ್ಬಂದಿಗಳ ಸಮಕ್ಷಮದಲ್ಲಿ ಅದೇ ದಿನ ಬೆಳಿಗಿನ ಜಾವ 3.10 ರಿಂದ 5.45 ರವರೆಗೆ ಮಹಜರು ಕ್ರಮ ಜರುಗಿಸಿರುತ್ತೇವೆ. ಮಹಜರು ಸಮಯದಲ್ಲಿ 2 ನೇ ಆರೋಪಿಯ ಕಡೆಯಿಂದ ಒಂಟಿ ನಳಿಕೆ ಕೋವಿಯನ್ನು, ಬೇಯಿಸಿದ 200 ಗ್ರಾಂ, ಮಾಂಸ, ವನ್ಯಪ್ರಾಣಿ ಚರ್ಮ, ಒಂದು ಟಾರ್ಚ್, ಎರಡು ಕತ್ತಿ, ಒಂದು ಹೆಡ್ ಟಾರ್ಚ್ ಮತ್ತು ಕಾಟ್ರೇಜ್ ನ್ನು ವಶಪಡಿಸಿಕೊಂಡಿರುತ್ತೇವೆ.

3. ಸ್ಥಳದಲ್ಲಿ 2 ನೇ ಆರೋಪಿಯಾದ ಸುನೀಲ್ ಎಂಬುವವರು ದೊರೆತಿದ್ದು, 2 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿರುತ್ತೇವೆ. ನಂತರ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳೊಂದಿಗೆ ಹಾಗೂ 2 ನೇ ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ಖಾಸಗಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಖಾಸಗಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಹಾಗೂ ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು

ಗುರುತಿಸಲಾಯಿತು. ಸಾಕ್ಷಿಯು ಮಹಜರು ಸಮಯದಲ್ಲಿ ತೆಗೆದ 3 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಕೃತ್ಯಕ್ಕೆ ಬಳಸಿದ ಒಂಟಿ ಕೋವಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಟಾರ್ಚ್ ಮತ್ತು ಹೆಡ್ ಟಾರ್ಚ್ ನ್ನು ಮು.ಮಾ.2 ಎಂದು ಗುರುತಿಸಲಾಯಿತು. ಎರಡು ಕತ್ತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಒಂದು ಚಿಕ್ಕ ಪಾತ್ರೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.4 ಎಂದು ಗುರುತಿಸಲಾಯಿತು. 4 ಕಾಟ್ರೇಜ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ಮು.ಮಾ. 5 ಎಂದು ಗುರುತಿಸಲಾಯಿತು.

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಃ ಮುಕ್ತಾಯ**

**ಪಾಟೀ ಸವಾಲುಃ ಇಲ್ಲ**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

**ಸಹಿ/-**

**ಪ್ರದೀಪ ಪೋತದಾರ**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**